UASB
LIBRARY
Newspaper Clippings
Pg .1 Monday 26-07-2021 Jai Kisan



ರೈತ ಸಿರಿ ಯೋಜನೆ

2019-20ನೇ ಸಾಲಿನಲ್ಲಿ ರೈತಸಿರಿ ಯೋಜನೆಯಡಿ 42,684 ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆದ 49,702 ರೈತರಿಗೆ 12.88 ಕೋಟಿ ರು. ವೆಚ್ಚದಲ್ಲಿ (ಹೆಕ್ಟೇರ್‌ಗೆ 10,000 ರು.ಗಳಂತೆ ಗರಿಷ್ಠ 2 ಹೆಕ್ಟೇರ್‌ಗೆ) ಪ್ರೋತ್ಸಾಹಧನವನ್ನು ನೀಡಲಾಗಿದೆ. 2020-21ನೇ ಸಾಲಿನಲ್ಲಿ 4.22 ಕೋಟಿ ರು. ವೆಚ್ಚದಲ್ಲಿ 6,288 ಹೆಕ್ಟೇರ್ ಪ್ರದೇಶದಲ್ಲಿ ಸಿರಿಧಾನ್ಯಗಳನ್ನು ಬೆಳೆದ 8,772 ರೈತರಿಗೆ ಹಾಗೂ 416 ಹೆಕ್ಟೇರ್ ಪ್ರದೇಶದಲ್ಲಿ ಚಿಯಾ/ ಕ್ವಿನೋವಾ/ ಟೆಫ್ ಬೆಳೆಗಳನ್ನು ಬೆಳೆದ 1040 ರೈತರಿಗೆ ಪ್ರೋತ್ಸಾಹಧನವನ್ನು ವಿತರಿಸಲಾಗಿದೆ.



ಭೂಸಿರಿ-ಭೂಮಿ ಯಂತ್ರ ಆರಂಭ

ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡುವ ಉದ್ದೇಶದಿಂದ ಕೃಷಿ ಇಲಾಖೆಯ ವತಿಯಿಂದ ನಾಗರಾಜ್ ಹೆಗಡೆಯವರು ತಯಾರಿಸಿರುವ ಭೂಸಿರಿ ಹಾಗೂ ಭೂಮಿತ್ರ ಯಂತ್ರವನ್ನು ಲೋಕಾರ್ಪಣೆಗೊಳಿಸಲಾಗಿದೆ. ರಾಜ್ಯ ಸರಕಾರ ಕಳೆದ ವರ್ಷ 200 ಕೋಟಿ ರು. ಅನ್ನು ಸಾವಯವ ಕೃಷಿಗೆ ನೀಡಲಾಗಿದೆ. ಸಾವಯವ ಕೃಷಿ ನಿಟ್ಟಿನಲ್ಲಿ ಭೂಸಿರಿ ಭೂಮಿತ್ರ ಯಂತ್ರಗಳು ಪ್ರಮುಖವಾಗಿವೆ. ಮಣ್ಣಿನ ಪರೀಕ್ಷೆಗೆ ಭೂಮಿತ್ರ ಸಹಾಯಕವಾಗಲಿದೆ.ಪ್ರಯೋ ಗಾಲಯಗಳಲ್ಲಿ ಮಣ್ಣು ಪರೀಕ್ಷೆಗೆ ಏಳು ದಿನಗಳು ಬೇಕು. ಆದರೆ ತಕ್ಷಣದ ಮಣ್ಣುಪರೀಕ್ಷೆಗೆ ಭೂಮಿತ್ರ ನೆರವಾಗಲಿದೆ. ರಾಸಾಯನಿಕ ಮುಕ್ತ ಸಾವಯವ ಕೃಷಿಗೆ ಸರಕಾರ ಹೆಚ್ಚು ಒತ್ತು ನೀಡಿದೆ.

ಏನಿದು ಭೂಸಿರಿ-ಭೂಮಿತ್ರ ಯಂತ್ರ: ಸಾಮಾನ್ಯವಾಗಿ ಕೃಷಿ ತ್ಯಾಜ್ಯ ವಸ್ತುಗಳು ಕೊಳೆತು ಸಾವಯವ ಗೊಬ್ಬರವಾಗಲು ಕನಿಷ್ಠ 40 ರಿಂದ 60 ದಿನಗಳು ಬೇಕಾಗುತ್ತವೆ. ಆದರೆ ಈ ಭೂಸಿರಿ ಸಂಚಾರಿ ವಾಹನದಲ್ಲಿ ತಕ್ಷಣವೇ ಗೊಬ್ಬರವನ್ನು ತಯಾರಿಸುವ ತಂತ್ರಜ್ಞಾನವನ್ನು ಅಳವಡಿಸಿರುವುದರಿಂದ ಹಾಗೂ ರೈತರ ಜಮೀನಿಗೆ ಹೋಗಿ ಅವರ ಕ್ಷೇತ್ರಗಳಲ್ಲಿ ಸಂಗ್ರಹ ಮಾಡಿದ ಕೃಷಿ ತ್ಯಾಜ್ಯ ವಸ್ತುಗಳನ್ನು ತಕ್ಷಣವೇ ಕತ್ತರಿಸಿ ಭೂಸಿರಿ ಯಂತ್ರದ ಮೂಲಕ ಸಾವಯವ ಗೊಬ್ಬರ ತಯಾರಿಸಿಕೊಡುವುದು ಅತ್ಯಂತ ಸೂಕ್ತವಾಗಿರುತ್ತದೆ. ನಮ್ಮ ರಾಜ್ಯದಲ್ಲಿ ವರ್ಷದ ಮೂರು ಹಂಗಾಮಿನಲ್ಲಿ ಮೆಕ್ಕೆ ಜೋಳವನ್ನು ಸುಮಾರು 20 ಲಕ್ಷಕ್ಕೂ ಹೆಚ್ಚು ಹೆಕ್ಟೇರ್‌ಗಳಷ್ಟು ಬೆಳೆಯಲಾಗುತ್ತದೆ. ಈ ಬೆಳೆಯಿಂದ ಬಂದ ಜೋಳದ ದಂಟನ್ನು ರೈತರು ಬಹುತೇಕ ಬೆಂಕಿ ಹಚ್ಚಿ ಸುಡುವುದು ಇಲ್ಲವೇ ನಿಧಾನಗತಿಯಲ್ಲಿ ಗೊಬ್ಬರವಾಗಲು ಬಿಸಾಡುವುದು ಸಾಮಾನ್ಯ. ಇದೇ ರೀತಿ ಮಲೆನಾಡಿನಲ್ಲಿಯೂ ಕೂಡಾ ಅಡಿಕೆ, ತೆಂಗು ಗಿಡಗಳ ಒಣಗಿದ ಗರಿಗಳು ಹಾಗೂ ಮರಗಳ ಒಣಗಿದ ಎಲೆಗಳು ಜೈವಿಕವಾಗಿ ಕಳೆಯಲು ಕನಿಷ್ಠ 3 ರಿಂದ 4 ತಿಂಗಳುಗಳು ಬೇಕಾಗುವುದು. ಆದರೆ ಈ ಭೂಸಿರಿ ಯಂತ್ರದಿಂದ ತೊಗರಿ ಕಟ್ಟಿಗೆ, ಕತ್ತಿ ಕಟ್ಟಿಗೆ, ಕಬ್ಬಿನ ರವದಿ, ಗೋವಿನ ಜೋಳದ ದಂಟು, ತೆಂಗು ಅಡಿಕೆಯ ಗರಿಗಳು ಮುಂತಾದ ತ್ಯಾಜ್ಯ ವಸ್ತುಗಳನ್ನು ತಕ್ಷಣವೇ ವಿಘಟನೆ ಮಾಡಿ ಭೂಸಿರಿ ಯಂತ್ರದಿಂದ ಸಾವಯವ ಗೊಬ್ಬರ ತಯಾರಿಸುವುದು ಮಣ್ಣಿನ ಫಲವತ್ತತೆ ಹೆಚ್ಚಿಸುವ ದೃಷ್ಟಿಯಿಂದ ವಾತಾವರಣದ ಮಾಲಿನ್ಯ ತಡೆಯುವಲ್ಲಿಕೂಡ ಅತ್ಯಂತ ಸೂಕ್ತವಾದ ಮಾರ್ಗವಾಗಿರುತ್ತದೆ.

ಕೃಷಿಯಲ್ಲಿ ಯಂತ್ರ ಬಳಕೆಗೆ ಒತ್ತು

ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು, ಕಡಿಮೆ ಬಾಡಿಗೆ ದರದಲ್ಲಿ ಭೂಮಿ ಸಿದ್ಧತೆಯಿಂದ ಕೊಯ್ಲು ಮತ್ತು ಸಂಸ್ಕರಣೆವರೆಗೆ ವಿವಿಧ ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಹೋಬಳಿ ಕೇಂದ್ರಗಳಲ್ಲಿ ಆಯ್ದ ಸಂಸ್ಥೆಗಳ ಸಹಯೋಗದೊಂದಿಗೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಪ್ರಸಕ್ತ 695 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, 20 ಲಕ್ಷ ರೈತರು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ. ಕೃಷಿ ಯಂತ್ರಧಾರೆ ಕೇಂದ್ರಗಳ ಸ್ಥಾಪನೆಗೆ 2019-20 ನೇ ಸಾಲಿನಲ್ಲಿ 32.36 ಕೋಟಿ ಮತ್ತು 2020-21 ನೇ ಸಾಲಿನಲ್ಲಿ 51.47 ಕೋಟಿ ರು. ವೆಚ್ಚ ಭರಿಸಲಾಗಿರುತ್ತದೆ.



"Your best teacher is your last mistakes"

UASB LIBRARY

Newspaper Clippings

Pg .2 Jai Kisan Monday 26-07-2021

26-07-2021 Vsv Pg 05

ರೈತರ ಖುಷಿ ಹೆಚ್ಚಿಸಿದ ಸರ್ಕಾರ

ಬಿತ್ತನೆಬೀಜ ವಿತರಣೆಯಲ್ಲಿ ಮುಂದೆ

- 2019-20ನೇ ಸಾಲಿನಲ್ಲಿ ಒಟ್ಟು 187.01 ಕೋಟಿ ರು.ಗಳಲ್ಲಿ 7.16 ಲಕ್ಷ ಕ್ವಿಂಟಾಲ್ ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜಗಳನ್ನು 19.62 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ.
- 2020-21 ನೇ ಸಾಲಿನಲ್ಲಿ ಒಟ್ಟು 169.16 ಕೋಟಿ ರು. ಮೌಲ್ಯದ 6.89 ಲಕ್ಷಕ್ವಿಂಟಾಲ್ ಪ್ರಮಾಣಿತ/ಗುಣಮಟ್ಟದ ಬಿತ್ತನೆ ಬೀಜಗಳನ್ನು ಸಹಾಯಧನದಲ್ಲಿ 21.03 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ.
- ಇನ್ನು 2019-20 ರ ಸಾಲಿನಲ್ಲಿ 37,50,822 ಮೆ.ಟನ್ (ಯೂರಿಯಾ-14,99,197 ಮೆ.ಟನ್, ಡಿ.ಎ.ಪಿ- 5,36,704 ಮೆ.ಟನ್, ಎಂ.ಒ.ಪಿ-2,53,078 ಮೆ.ಟನ್ ಮತ್ತು ಕಾಂಪ್ಲೆಕ್ಸ್-14,61,842 ಮೆ.ಟನ್) ಪ್ರಮಾಣದ ರಸಗೊಬ್ಬರಗಳು ಸರಬರಾಜಾಗಿರುತ್ತದೆ.
- 2020-21ರ ಸಾಲಿನಲ್ಲಿ 44,34,265 ಮೆ.ಟನ್(ಯೂರಿಯಾ-17,47,573 ಮೆ.ಟನ್, ಡಿ.ಎ.ಪಿ- 5,61,230 ಮೆ.ಟನ್, ಎಂ.ಒ.ಪಿ-3,57,445 ಮೆ.ಟನ್ ಮತ್ತು ಕಾಂಪ್ಲೆಕ್ಸ್-17,71,017 ಮೆ.ಟನ್) ಪ್ರಮಾಣದ ರಸಗೊಬ್ಬರಗಳು ಸರಬರಾಜಾಗಿರುತ್ತದೆ. ಕಳೆದ ಸಾಲಿಗೆ ಹೋಲಿಸಿದಲ್ಲಿ 2020-21ನೇ ಸಾಲಿನಲ್ಲಿ ಶೇ. 18 ರಷ್ಟು ರಸಗೊಬ್ಬರವು ಹೆಚ್ಚಾಗಿ ಸರಬರಾಜಾಗಿದೆ.

ರೈತರೊಂದಿಗೆ ನಿಂತ ಇಲಾಖೆ

ಕೋವಿಡ್-19ರ ಸಂಕಷ್ಟ ಸಮಯದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ರೈತರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಸಲಹೆ ನೀಡುವ ಸಲುವಾಗಿ ಮತ್ತು ಕೃಷಿ ಚಟುವಟಿಕೆಯನ್ನು ಸುಗಮಗೊಳಿಸಲು ಪ್ರಮುಖ ಹೆಜ್ಜೆಯಾಗಿ ಕೃಷಿ ಇಲಾಖೆಯ ಆವರಣದಲ್ಲಿ ಅಗ್ರಿ ವಾರ್‌ರೂಮ್ ಅನ್ನು ಸ್ಥಾಪಿಸಿ ರೈತರಿಗೆ ದೂರವಾಣಿ ಮೂಲಕ ಮಾಹಿತಿಯನ್ನು ನೀಡಲಾಗಿರುತ್ತದೆ. ಕೃಷಿ ಚಟುವಟಿಕೆಯನ್ನು ಸುಗಮಗೊಳಿಸಲು ಪ್ರಮುಖವಾಗಿ ಕೃಷಿ ಕಾರ್ಯಕ್ಕೆ ಯಾವುದೇ ತೊಂದರೆ ಆಗದಂತೆ ರೈತರಿಗೆ ಇಲಾಖೆಯು ಗ್ರೀನ್ ಪಾಸ್ ವಿತರಣೆ ಮಾಡಿ ಕೃಷಿ ಸಾಮಾಗ್ರಿಗಳ ಮತ್ತು ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಲಾಕ್‌ಡೌನ್ ನಿಂದ ಸಡಿಲಗೊಳಿಸಿ ಸಾಗಾಣಿಕೆಗೆ ಅನುಕೂಲ ಮಾಡಲಾಯಿತು. 2020-21 ನೇ ಸಾಲಿನಲ್ಲಿ ಕೋವಿಡ್-19ರ ಲಾಕ್‌ಡೌನ್ ಸಮಸ್ಯೆಯಿಂದ ಸಂಕಷ್ಟಕ್ಕೆ ಒಳಗಾಗಿರುವ 2019-20ನೇ ಸಾಲಿನಲ್ಲಿ ಮುಸುಕಿನ ಜೋಳ ಬೆಳೆದ ರೈತರಿಗೆ 5000 ರು.ದಂತೆ ಆರ್ಥಿಕ ನೆರವನ್ನು 8,01,258 ರೈತರಿಗೆ 385.75 ಕೋಟಿ ರು. ಅನುದಾವನ್ನು ರೈತರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿರುತ್ತದೆ. ರಾಜ್ಯದಲ್ಲಿ ಸ್ಥಾಪಿತವಾಗಿರುವ ಸುಮಾರು 540 ಕೃಷಿ ಯಂತ್ರಧಾರೆ ಕೇಂದ್ರಗಳನ್ನು ತೆರೆದು ರೈತರಿಗೆ ಅಗತ್ಯ ಉಪಕರಣಗಳನ್ನು ಒದಗಿಸಲಾಗಿರುತ್ತದೆ.



ನನ್ನ ಬೆಳೆ ನನ್ನ ಹಕ್ಕು-ಬೆಳೆ ಸಮೀಕ್ಷೆ

2019-20ನೇ ಸಾಲಿನಲ್ಲಿ ಬೆಳೆಸಮೀಕ್ಷೆ ಮೊಬೈಲ್ ಆ್ಯಪ್ ಬಳಸಿಕೊಂಡು ಪೂರ್ವ ಮುಂಗಾರಿನಲ್ಲಿ 36.88 ಲಕ್ಷ, ಮುಂಗಾರಿನಲ್ಲಿ 186.87 ಲಕ್ಷ, ಹಿಂಗಾರಿನಲ್ಲಿ 109.35 ಲಕ್ಷ ಮತ್ತು ಬೇಸಿಗೆ ಹಂಗಾಮಿನಲ್ಲಿ 22.86 ಲಕ್ಷ ತಾಕುಗಳಂತೆ ಒಟ್ಟು 355.96 ಲಕ್ಷ ತಾಕುಗಳಲ್ಲಿ ಬೆಳೆ ಸಮೀಕ್ಷೆಯನ್ನು ಮಾಡಲಾಗಿರುತ್ತದೆ. 2020-21ನೇ ಸಾಲಿನಲ್ಲಿ ರೈತರ ಮೊಬೈಲ್‌ಆ್ಯಪ್ ಮುಖೇನ, ಮುಂಗಾರಿನಲ್ಲಿ 80.03 ಲಕ್ಷ ಹಿಂಗಾರಿನಲ್ಲಿ 0.57 ಲಕ್ಷ ಮತ್ತು ಬೇಸಿಗೆ ಹಂಗಾಮಿನಲ್ಲಿ 0.03 ಲಕ್ಷ ತಾಕುಗಳಂತೆ ಒಟ್ಟು 80.63 ಲಕ್ಷ ತಾಕುಗಳನ್ನು ರೈತರ ಮೂಲಕ ಹಾಗೂ ಮುಂಗಾರಿನಲ್ಲಿ 131.42 ಲಕ್ಷ, ಹಿಂಗಾರಿನಲ್ಲಿ 110.18 ಲಕ್ಷ ಮತ್ತು ಬೇಸಿಗೆ ಹಂಗಾಮಿನಲ್ಲಿ 51.59 ಲಕ್ಷ ತಾಕುಗಳಂತೆ ಒಟ್ಟು 293.19 ಲಕ್ಷ ತಾಕುಗಳನ್ನು ಖಾಸಗಿ ನಿವಾಸಿಗಳ ಮೂಲಕ ಸಮೀಕ್ಷೆ ಮಾಡಲಾಗಿರುತ್ತದೆ. ಒಟ್ಟಾರೆಯಾಗಿ 2020-21ನೇ ಸಾಲಿನಲ್ಲಿ 373.82 ಲಕ್ಷ ತಾಕುಗಳ ಸಮೀಕ್ಷೆಯನ್ನು ಕೈಗೊಳ್ಳಲಾಗಿರುತ್ತದೆ. ಹಾಗೆಯೇ ಬೆಳೆಸಮೀಕ್ಷೆ ವಿವರಗಳನ್ನು ಪಹಣಿಯಲ್ಲಿ ದಾಖಲೀಕರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು,ಈ ಮಾಹಿತಿಯನ್ನು ಸರಕಾರದ ವಿವಿಧ ಯೋಜನೆಗಳಿಗೆ ಬಳಸಿಕೊಳ್ಳಲಾಗುತ್ತಿದೆ.



ಕೃಷಿ ಯಾಂತ್ರೀಕರಣ

- 2019-20ನೇ ಸಾಲಿನಲ್ಲಿ 454.65 ಕೋಟಿ ರು. ಸಹಾಯಧನ ಒದಗಿಸಿ, ಸುಮಾರು 3.37ಲಕ್ಷ ಫಲಾನುಭವಿಗಳಿಗೆ ಕೃಷಿ ಯಾಂತ್ರೀಕರಣ ಮತ್ತು ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳನ್ನು ಒದಗಿಸಲಾಗಿರುತ್ತದೆ.
- 2020-21 ನೇ ಸಾಲಿನಲ್ಲಿ 467.59 ಕೋಟಿ ರು. ಸಹಾಯಧನ ಒದಗಿಸಿ, ಸುಮಾರು 8.48 ಲಕ್ಷ ಫಲಾನುಭವಿಗಳಿಗೆ ಕೃಷಿ ಯಾಂತ್ರೀಕರಣ ಮತ್ತು ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳನ್ನು ಒದಗಿಸಲಾಗಿರುತ್ತದೆ.

UASB LIBRARY

Newspaper Clippings

Pg .3 Jai Kisan Monday 26-07-2021

ಕೃಷಿ ಸಂಜೀವಿನಿ ಸ್ಥಾಪನೆ

ಕೀಟ/ರೋಗ ಮತ್ತು ಕಳೆಗಳ ಬಾಧೆ ಹಾಗು ಮಣ್ಣಿನ ಪೋಷಕಾಂಶಗಳ ಕೊರತೆ ಮತ್ತು ಸಮರ್ಪಕ ನಿರ್ವಹಣೆ ಕುರಿತಂತೆ ರೈತರ ತಾಕುಗಳಿಗೆ ಭೇಟಿ ನೀಡಿ ಹತೋಟಿ ಕ್ರಮಗಳ ಕುರಿತು ಮಾರ್ಗೋಪಾಯ ಗಳನ್ನು ಒದಗಿಸಲು ರಾಜ್ಯ ಸರಕಾರದ ವತಿಯಿಂದ 60 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ (ಕೃಷಿ ಸಂಜೀವಿನಿ ವಾಹನ ಒಳಗೊಂಡಂತೆ) ಗಳನ್ನು ಎಲ್ಲಾ ಜಿಲ್ಲೆಗಳಲ್ಲಿ 2020-21 ನೇ ಸಾಲಿನಲ್ಲಿ ಸ್ಥಾಪಿಸಿ, ಯೋಜನೆ ಅನುಷ್ಠಾನಕ್ಕಾಗಿ 12.70 ಕೋಟಿ ರು. ವೆಚ್ಚ ಭರಿಸಲಾಗಿರುತ್ತದೆ.

ಯೋಜನಾವಾರು ಸಾಧನೆಯಲ್ಲಿಯೂ ಮೇಲುಗೈ

- 2019-20ನೇ ಸಾಲಿನಲ್ಲಿ ಶೇ.96.3ರಷ್ಟು ಪ್ರಗತಿ ಸಾಧನೆ
- 2020-21ನೇ ಸಾಲಿನಲ್ಲಿ ಶೇ.98.4 ರಷ್ಟು ಪ್ರಗತಿ ಸಾಧನೆ

ರಾಜ್ಯ ಸರಕಾರ ಪಾಲಿನ ವಿವರ

- 2019-20: 45,28,735 ರೈತರಿಗೆ 905.74 ಕೋಟಿ ರು. ನೆರವು.
- 2020-21: 49,18,986 ರೈತರಿಗೆ 983.71 ಕೋಟಿ ರು. ನೆರವು.
- 2021-22ರಲ್ಲಿ ಇಲ್ಲಿಯವರೆಗೂ 47,98,095 ರೈತರಿಗೆ 959.61 ಕೋಟಿ ರು. ನೆರವು.

ಕೇಂದ್ರದ ಪಾಲು

- 2019-20 : 51,10,002 ರೈತರಿಗೆ 2789.67 ಕೋಟಿ ರು. ನೆರವು
- 2020-21 : 53,16,278 ರೈತರಿಗೆ 3157.73 ಕೋಟಿ ರು. ನೆರವು
- 2021-22ರಲ್ಲಿ ಇಲ್ಲಿಯವರೆಗೂ 53,28,759 ರೈತರಿಗೆ 1065.75 ಕೋಟಿ ರು. ನೆರವು

ಎರಡು ವರ್ಷದ ಸಾಧನೆ

- 2019-20ನೇ ಸಾಲಿನಲ್ಲಿ 113.67 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿಗೆ 103.97 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿರುತ್ತದೆ
- 2019-20ನೇ ಸಾಲಿನಲ್ಲಿ ಆಹಾರ ಧಾನ್ಯಗಳ 138.67 ಲಕ್ಷ ಟನ್ ಉತ್ಪಾದನಾ ಗುರಿಗೆ 136.41 ಲಕ್ಷ ಟನ್ ಉತ್ಪಾದನೆಯಾಗಿರುತ್ತದೆ.
- 2020-21ನೇ ಸಾಲಿನಲ್ಲಿ 110.00 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳ ಬಿತ್ತನೆ ಗುರಿಗೆ 111.41 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿರುತ್ತದೆ.
- 2020-21ನೇ ಸಾಲಿನಲ್ಲಿ 133.04 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪಾದನಾ ಗುರಿಗೆ 158.73 ಲಕ್ಷ ಟನ್ ದಾಖಲೆ ಪ್ರಮಾಣದಲ್ಲಿ ಹೆಚ್ಚಿನ ಉತ್ಪಾದನೆಯಾಗಿರುತ್ತದೆ.

ಪಿಎಂ ಕಿಸಾನ್ ಸಮ್ಮಾನ್ ನಿಧಿ

ಕೇಂದ್ರ ಸರಕಾರದ ಮಹತ್ವದ ಯೋಜನೆಯಾಗಿದ್ದ ಪ್ರಧಾನಿ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಗೆ ಮೇಲ್ನೋಟಕ್ಕೆ ಸಹಾಯಧನ ನೀಡುವ ಯೋಜನೆ ಎನಿಸಬಹುದು. ಆದರೆ ವೇತನ, ಪಿಂಚಣಿ, ಆರ್ಥಿಕ ಭದ್ರತೆ ಸೇರಿದಂತೆ ಯಾವುದೇ ಸೌಲಭ್ಯ ಹೊಂದಿರದ ಕೃಷಿಕನಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಈ ಯೋಜನೆಯನ್ನು ಘೋಷಿಸಿದಾಗ ಹೊಸ ಆಶಾಕಿರಣ ಕಾಣಿಸಿತ್ತು. ವರ್ಷಕ್ಕೆ ಮೂರು ಕಂತುಗಳಲ್ಲಿ ಒಟ್ಟು ಆರು ಸಾವಿರ ರು ರೈತರ ಖಾತೆಗೆ ನೇರವಾಗಿ ಜಮೆ ಮಾಡುವ ಯೋಜನೆಯನ್ನು ರೈತರು ಸ್ವಾಗತಿಸಿದ್ದರು. ಮೋದಿ ಅವರ ಈ ಯೋಜನೆಗೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಅಧಿಕಾರಕ್ಕೆ ಬರುತ್ತಿದ್ದಂತೆ, ಹೆಚ್ಚುವರಿ ನಾಲ್ಕು ಸಾವಿರ ರು. ನೀಡುವ ಮೂಲಕ ಮತ್ತೊಂದು ಐತಿಹಾಸಿಕ ತೀರ್ಮಾನವನ್ನು ಕೈಗೊಂಡರು. ಆರಂಭದಲ್ಲಿ ಈ ಯೋಜನೆಯಲ್ಲಿ ಮಧ್ಯವರ್ತಿಗಳ ಕೈವಾಡ ಹೆಚ್ಚಿರಬಹುದು ಎನ್ನುವ ಆತಂಕವನ್ನು ಅನೇಕರು ವ್ಯಕ್ತಪಡಿಸಿದ್ದರು. ಇದನ್ನು ತಪ್ಪಿಸುವ ಉದ್ದೇಶದಿಂದಲೇ ರಾಜ್ಯ ಹಾಗೂ ಕೇಂದ್ರ ಸರಕಾರ ರೈತರ ಖಾತೆಗೆ ನೇರವಾಗಿ ಹಣ ಜಮೆ ಮಾಡುವ ನಿರ್ಧಾರ ಕೈಗೊಂಡಿತ್ತು. ಇದರಿಂದ ಮಧ್ಯವರ್ತಿಗಳ ಕಮಿಷನ್‌ಗೆ ಜಾಗವಿರುವುದಿಲ್ಲ ಎನ್ನುವುದು ಸರಕಾರದ ಉದ್ದೇಶವಾಗಿತ್ತು. ಭಾರತ ಸರಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ ನಿಧಿ ಯೋಜನೆಯಡಿ ಪ್ರತಿ ಅರ್ಹ ರೈತ ಕುಟುಂಬಕ್ಕೆ ವಾರ್ಷಿಕ 6,000 ರು.ಗಳ ನಗದು ನೆರವನ್ನು ನೀಡುತ್ತಿದೆ. ಇದರೊಂದಿಗೆ ರಾಜ್ಯ ಸರಕಾರವು ಹೆಚ್ಚುವರಿ 4000 ರು.ಗಳ ಆರ್ಥಿಕ ನೆರವನ್ನು ಎರಡು ಕಂತುಗಳಲ್ಲಿ ಪಿಎಂ ಕಿಸಾನ್ ಕರ್ನಾಟಕ ಯೋಜನೆಯಡಿ ನೀಡುತ್ತಿದೆ.

26-07-2021
Vsv Pg 05

ಬಾಕಾಹುಗೆ ಮೋದಿ ಪ್ರಶಂಸೆ

ಮಂಗಳೂರು: ಕರಾವಳಿ, ಮಲೆನಾಡಿನಲ್ಲಿ ಬಾಳೆಕಾಯಿ ಹುಡಿ(ಬಾಕಾಹು) ಕ್ರಾಂತಿ ಪ್ರಧಾನಿ ನರೇಂದ್ರ ಮೋದಿಯವರ ಮೆಚ್ಚುಗೆಗೆ ಪಾತ್ರವಾಗಿದೆ. ಆಕಾಶವಾಣಿಯ ಮನ್ ಕೀ ಬಾತ್ ಸರಣಿಯಲ್ಲಿ ಭಾನುವಾರ ಅವರು, ಮಹಿಳೆಯರು ಯಾವ ರೀತಿ ಈ ಬಾಕಾಹುವಿನಿಂದ ಆದಾಯ ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ ಎಂಬುದನ್ನು ವಿವರಿಸಿದ್ದಾರೆ.

ಕರೊನಾ ವೇಳೆಯಲ್ಲೇ ಈ ಕೆಲಸ ಶುರುವಾಗಿದೆ. ಮಹಿಳೆಯರು ಬಾಕಾಹು ಹುಡಿಯ ದೋಸೆ, ಸಿಹಿತಿಂಡಿ ತಯಾರಿಸಿ, ಸಾಮಾಜಿಕ ಜಾಲ ತಾಣದಲ್ಲಿ ಅದರ ಫೋಟೋ ಶೇರ್ ಮಾಡಿದ್ದರಿಂದ ಬೇಡಿಕೆ ಹೆಚ್ಚಾಗಿದೆ. ಈ ಹೊಸ ಆವಿಷ್ಕಾರ ಮಾಡುವಲ್ಲಿ ಮಹಿಳೆಯರೇ ಮುಂದಿರುವುದು ಅನೇಕರಿಗೆ ಪ್ರೇರಣೆಯಾಗಲಿದೆ ಎಂದು ಮೋದಿ ಪ್ರಶಂಸಿಸಿದ್ದಾರೆ.

ಕೇರಳದಲ್ಲಿ ಮಕ್ಕಳ ಪೌಷ್ಟಿಕ ಆಹಾರಕ್ಕೆ ಮಾತ್ರ ಬಳಕೆಯಾಗುತ್ತಿದ್ದ ಬಾಳೆಕಾಯಿ ಹುಡಿಯನ್ನು ಕರಾವಳಿಯಲ್ಲಿ ಪಸರಿಸುವುದಕ್ಕೆ ಅಡಕೆ ಪತ್ರಿಕೆ ಸಂಪಾದಕ ಶ್ರೀಪಡ್ರೆಯವರ ಅಭಿಯಾನ ಕಾರಣವಾಗಿತ್ತು. ಅವರು ಈ ಹುಡಿ ಮಾಡುವ



ಕ್ರಮವನ್ನು ಕೇರಳದ ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳಿಂದ ಪಡೆಯಲು ತುಮಕೂರಿನ ನಯನಾ ಆನಂದ್ ಎನ್ನುವ ಮಹಿಳೆಗೆ ಪ್ರೇರಣೆಯಾಗಿದ್ದರು. ಆ ಬಳಿಕ ನಯನಾ ಯಶಸ್ವಿಯಾಗಿ ಬಾಕಾಹು ತಯಾರಿಸಿ, ಹಲವು ವಿಧದ ತಿಂಡಿ ತಯಾರಿಸಿದ್ದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ಪಸರಿಸಿ ಈಗ ಮಲೆನಾಡು ಕರಾವಳಿಯ ಹಲವೆಡೆ ಮಹಿಳೆಯರು ಬಾಕಾಹು ತಯಾರಿಸುವಂತಾಗಿದೆ. ಈ ಪ್ರಕ್ರಿಯೆ ಬಗ್ಗೆ **ವಿಜಯವಾಣಿ** ಲೇಖನ, ಸುದ್ದಿ ಪ್ರಕಟಿಸಿತ್ತು.

26-07-2021
Vv Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in